ಕಾಲಮಿತಿಯಿಳಗೆ ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲಾಗುವುದು; (ವಿವರ ನೀಡುವುದು)?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಯಾವುದೇ ಸಾಂಸ್ಕೃತಿಕ ಭವನ ನಿರ್ಮಾಣ ಮಾಡುವ ಪ್ರಸ್ತಾವನೆ ಇರುವುದಿಲ್ಲ. ಆದುದರಿಂದ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

On line Application RTE Seats

1388(435); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

a) Total Number of Seats available every Year for being filled under 25% quota of RTE in the State;

b) Whether the govt has taken decision to make the application procedure on line for the 25% quota uder the RTE;

c) Will it not deprive lower strata families to get quality education under this quota;

d) Will th Govt continue system of calling for the applications under manual submission?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

a)

S. No	Year	Available seats
1	2012-13	70,000
2	2013-14	1,08,344
3	2014-15	1,10,794

b) Yes

c) Lower strata families will not be denied quality education under RTE quota, because those who have no access to internet are allowed to apply offline.

d) Yes

ಕನ್ನಡ ಭಾಷೆಯ ಸಂಶೋಧನೆ

1389(436); ಶ್ರೀ ಕೆ. ಗೋಪಾಲಯ್ಯ (ಮಹಾಲಕ್ಷ್ಮೀ ಲೇಔಟ್)

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಅನುಷ್ಠಾನಕ್ಕಾಗಿ ಹಾಗೂ ಕನ್ನಡ ಭಾಷೆಯಲ್ಲಿ ಸಂಶೋಧನೆ ಹಾಗೂ ಇತರೆ ಚಟುವಟಿಕೆಗಳಿಗಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನೆರವನ್ನು ಕೋರಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಹಣವನ್ನು ಕೋರಲಾಗಿದೆ?

ಇ) 2008 ರಲ್ಲಿಯೇ ಕೇಂದ್ರ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡಿದ್ದರೂ, ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ನೆರವನ್ನು ಕೋರಿರುವುದಿಲ್ಲವೇ?

ಈ) ಕೋರಿದ್ದರೆ, 2008 ರಿಂದ ಎಷ್ಟು ಹಣ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದೆ?

ಶ್ರೀಮತಿ ಉಮಾಶ್ರೀ (ಮಹಿಳಾ ಕನ್ನಡ ಮತ್ತು ಮಕ್ಕಳ ಅಬಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ₹ 15.00 ಕೋಟಿ ಹಾಗೂ ಅಧ್ಯಯನ ಕೇಂದ್ರದ ಮೂಲಕ ಕನ್ನಡ ಭಾಷೆಯ ಅಭಿವೃದ್ಧಿಗೆ ವಿವಿಧ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ₹ 25.00 ಕೋಟಿ ಒಟ್ಟು ₹ 40.00 ಕೋಟಿ ಅನುದಾನ ನೀಡುವಂತೆ